# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
ಅಂಜನಾಪುರ ಉಪ ವಿಭಾಗ
2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಕೊತ್ತನೂರು ಮುಖ್ಯರಸ್ತೆ, ಬೆಂಗಳೂರು-560078

ಸಂಖ್ಯೆ : ಸ.ಕಾ.ಅ/ಅ.ಉ.ವಿ/ಪಿ.ಆರ್/205/2021-22 ದಿನಾಂಕ : 20-12-2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:18-12-2021 ರಂದು ವಾರ್ಡ್ ನಂ.196-ಅಂಜನಾಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

********

### ಸಭೆಗೆ ಹಾಜರಾಗಿದ್ದವರ ಅಧಿಕಾರಿ/ಸಿಬ್ಬಂದಿಗಳ ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಪ್ರಮೋದ್ ಕುಮಾರ್.ಎನ್.ಜಿ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ನರೇಂದ್ರ ಕುಮಾರ್.ಎ | ಸದಸ್ಯ ಕಾರ್ಯದರ್ಶಿ/ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀ ರಮೇಶ್.ಎಸ್.ಆರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿರುತ್ತಾರೆ. |
| 4 | ಶ್ರೀಮತಿ ಪ್ರೀತಿ.ಜೆ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿರುತ್ತಾರೆ. |
| 5 | ಶ್ರೀ ಯೋಗೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 6 | ಶ್ರೀ ರಮೇಶ್ | ಸಹಾಯಕ ಅಭಿಯಂತರರು (ಬೆಸ್ಕಾಂ) | ಗೈರು ಹಾಜರಿರುತ್ತಾರೆ |
| 7 | ಶ್ರೀ ಕೃಷ್ಣ ನಾಯಕ್ | ಸಹಾಯಕ ಇಂಜಿನಿಯರ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) | ಗೈರು ಹಾಜರಿರುತ್ತಾರೆ. |
| 8 | ಶ್ರೀ ರಂಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿರುತ್ತಾರೆ. |
| 9 | ಶ್ರೀ ಸದಾನಂದ | ಕಂದಾಯ ಪರಿವೀಕ್ಷಕರು | ಗೈರು ಹಾಜರಿರುತ್ತಾರೆ. |
| 10 | ಶ್ರೀ ಶ್ರೀನಿವಾಸ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | ಗೈರು ಹಾಜರಿರುತ್ತಾರೆ. |
| 11 | ಶ್ರೀ ಜಗದೀಶ್ | ಬೀದಿ ದೀಪಗಳ ನಿರ್ವಹಣೆ | ಹಾಜರಿರುತ್ತಾರೆ. |
| 12 | ಶ್ರೀ ವಿನೋದ್ | ವಾರ್ಡ್ ಮಾರ್ಷಲ್ | ಹಾಜರಿರುತ್ತಾರೆ. |
| 13 | ಶ್ರೀ ಪರಮೇಶ್.ಆರ್ | ಘನತ್ಯಾಜ್ಯ | ಹಾಜರಿರುತ್ತಾರೆ. |

### ಸಭೆಗೆ ಹಾಜರಾಗಿದ್ದವರ ಬಡಾವಣೆಗಳ ಕ್ಷೇಮಾಭಿವೃದ್ಧಿ ಸಂಘ/ಸಾರ್ವಜನಿಕರು ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಬಡಾವಣೆಗಳ ಕ್ಷೇಮಾಭಿವೃದ್ಧಿ ಸಂಘ | ಹಾಜರಾತಿ |
|---|---|---|---|
| 1 | ಶ್ರೀ ಬಿ.ಜೆ.ಶ್ರೀಪತಿ | ರಾಯಲ್ ಪಾರ್ಕ್ ಬಡಾವಣೆ RWA | ಹಾಜರಿರುತ್ತಾರೆ. |
| 2 | ಶ್ರೀಮತಿ ಮುನಿರತ್ನಮ್ಮ | ಅಂಜನಾಪುರ ಗ್ರಾಮ RWA | ಹಾಜರಿರುತ್ತಾರೆ. |
| 3 | ಶ್ರೀ ರಾಜಶೇಖರ್.ಹೆಚ್.ಎಸ್ | ಅಂಜನಾಪುರ ಗ್ರಾಮ RWA | ಹಾಜರಿರುತ್ತಾರೆ. |
| 4 | ಶ್ರೀ ಗೋವಿಂದರಾಜು | ಹರಿನಗರ RWA | ಹಾಜರಿರುತ್ತಾರೆ. |
| 5 | ಶ್ರೀ ಬಿ.ಆರ್.ದೇವಾಡಿಗ | ಶ್ರೀನಿಧಿ ಬಡಾವಣೆ RWA | ಹಾಜರಿರುತ್ತಾರೆ. |
| 6 | ಶ್ರೀ ರಸೂಲ್ | ಹರಿನಗರ RWA | ಹಾಜರಿರುತ್ತಾರೆ. |
| 7 | ಶ್ರೀ ಫಾರೋಖ್ | ಹರಿನಗರ RWA | ಹಾಜರಿರುತ್ತಾರೆ. |
| 8 | ಶ್ರೀ ಮುನಿನಾರಾಯಣ.ಎಂ | ಹರಿನಗರ RWA | ಹಾಜರಿರುತ್ತಾರೆ. |
| 9 | ಶ್ರೀ ನದೀಮ್ | ಅಲವಹಳ್ಳಿ RWA | ಹಾಜರಿರುತ್ತಾರೆ. |

ಮು.ತಿ.ನೋ 2ಕ್ಕೆ

Scanned with CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂಜನಾಪುರ ವಾರ್ಡ್ ಸಂಖ್ಯೆ.196ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಪ್ರಮೋದ್ ಕುಮಾರ್.ಎನ್.ಜಿ ರವರು ದಿನಾಂಕ: 18-12-2021 ರಂದು ಶನಿವಾರ 11.30ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ನರೇಂದ್ರ ಕುಮಾರ್.ಎ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ)**

ವಾರ್ಡ್ ವ್ಯಾಪ್ತಿಯ ಅವಲಹಳ್ಳಿ ಕೆರೆ ಏರಿ ಕಡೆಯಿಂದ ರಾಯಲ್ ಪಾಕ್ ಬಡಾವಣೆ ಕಡೆಗೆ ಪ್ರತಿದಿನ ಕೋಳಿ ಕಸ ಹಾಗೂ ವೈದ್ಯಕೀಯ ತ್ಯಾಜ್ಯವನ್ನು ಬೀಸಾಡುತ್ತಿರುವ ಬಗ್ಗೆ ಹಾಗೂ ಶ್ರೀನಿಧಿ ಬಡಾವಣೆ 8ನೇ ಅಡ್ಡ ರಸ್ತೆಯಲ್ಲಿನ ಖಾಲಿ ನಿವೇಶನಗಳಲ್ಲಿ ತ್ಯಾಜ್ಯವನ್ನು ಬಿಸಾಡುತ್ತಿರುವ ಬಗ್ಗೆ ದೂರಿರುತ್ತಾರೆ.

ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

2. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ)**

ವಾರ್ಡ್ ವ್ಯಾಪ್ತಿಯಲ್ಲಿನ ಒಳಚರಂಡಿ ಛೇಂಬರ್‌ಗಳಿಂದ ತೆಗೆದ ತ್ಯಾಜ್ಯ/ಮಣ್ಣನ್ನು ರಸ್ತೆಗಳ ಮೇಲೆ ಬಿಟ್ಟಿರುವ ಬಗ್ಗೆ ದೂರಿರುತ್ತಾರೆ. ಬಿ.ಡಿ.ಎ 5ನೇ ಬ್ಲಾಕ್ ರಸ್ತೆಗಳಲ್ಲಿ ಒಳಚರಂಡಿ ನೀರು ಛೇಂಬರ್‌ನಿಂದ ಹೊರಗೆ ಬಂದು ರಸ್ತೆಯ ಮೇಲೆ ಹರಿಯುತ್ತಿರುವ ಬಗ್ಗೆ ದೂರಿರುತ್ತಾರೆ. ಶ್ರೀನಿಧಿ ಬಡಾವಣೆ 2ನೇ ಅಡ್ಡ ರಸ್ತೆ ಇಂದ 15ನೇ ಅಡ್ಡ ರಸ್ತೆ ವರೆಗಿನ ಛೇಂಬರ್‌ಗಳನ್ನು ರಸ್ತೆಯ ಮಟ್ಟಕ್ಕೆ ಎತ್ತಿರಿಸಲು ಕೋರಿರುತ್ತಾರೆ. ಹರಿನಗರ ರಾಮಮಂದಿರಿ ರಸ್ತೆಯಲ್ಲಿ ಕಲ್ಲು ಬಂಡೆಯನ್ನು ಒಡೆದು ನೂತನವಾಗಿ ಅತ್ಯಗತ್ಯವಾಗಿದ್ದ ಒಳಚರಂಡಿ ಪೈಪನ್ನು ಅಳವಡಿಸಿರುವ ಬಗ್ಗೆ ಸಾರ್ವಜನಿಕರು ಶ್ಲಾಘನೆ ವ್ಯಕ್ತಪಡಿಸಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

3. **ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಬೊಮ್ಮನಹಳ್ಳಿ ವಲಯ**

ರಾಯಲ್ ಪಾರ್ಕ್ ಬಡಾವಣೆಯಲ್ಲಿ ಹೊಸದಾಗಿ ಅಳವಡಿಸಿರುವ ಎಲ್.ಇ.ಡಿ ಲೈಟ್‌ಗಳು ಸಡಿಲ ಸಂಪರ್ಕದಿಂದಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ದೂರಿರುತ್ತಾರೆ. ಅವಲಹಳ್ಳಿ ಸಹರ ಬೇಕರಿ ರಸ್ತೆಯಲ್ಲಿ ಸೂಮಾರು 30 ಎಲ್.ಇ.ಡಿ ಲೈಟ್‌ಗಳು ಕಾರ್ಯನಿರ್ವಹಿಸದೇ ಇರುವ ಬಗ್ಗೆ ದೂರಿರುತ್ತಾರೆ. ನಾರಾಯಣನಗರ 2ನೇ ಬ್ಲಾಕ್‌ನಲ್ಲಿ ಹೊಸದಾಗಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಲು ಈ ಹಿಂದೇ ಅಳವಡಿಸಿದ್ದ ಸೋಡಿಯಂ ವೇಪರ್ ಲೈಟ್‌ಗಳನ್ನು ತೆಗೆದಿದ್ದು ಆದರೆ ಈವರೆವಿಗೂ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಿರುವುದಿಲ್ಲ. ಆದ್ದರಿಂದ ಈ ಹಿಂದೇ ಇದ್ದಂತಹ ಸೋಡಿಯಂ ವೇಪರ್ ಲೈಟ್‌ಗಳನ್ನು ಪುನಃ ಅಳವಡಿಸಲು ಕೋರಿರುತ್ತಾರೆ. ಅವಲಹಳ್ಳಿಯಲ್ಲಿ ಬೀದಿ ದೀಪಗಳಿಗೆ ಟೈಮರ್‌ಗಳನ್ನು ಅಳವಡಿಸಲು ಹಾಗೂ ರಾಯಲ್ ಪಾರ್ಕ್ ಬಡಾವಣೆಯಲ್ಲಿ ಸ್ವೀಚ್‌ಅನ್ನು ಅಳವಡಿಸಲು ಕೊರಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

4. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ ಇಲಾಖೆ)**

ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆಯಿಂದ ಅಂತರ್ಗತ ಕೇಬಲ್ ಅಳವಡಿಸಲು ರಸ್ತೆಯನ್ನು ಕೇವಲ ಪಿಟ್ ಅಗೆಯಬೇಕಾಗಿದ್ದು ಆದರೆ ರಸ್ತೆಯ ಉದ್ದಕ್ಕೂ ಸಹ ಅಗೆಯುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವತ್ತದೆ ಆದ್ದರಿಂದ ಸದರಿ ರಸ್ತೆ ಅಗೆತಗಳನ್ನು ಮುಚ್ಚಿ ವೆಟ್ ಮಿಸ್ಕ್ ಅಳವಡಿಸಲು ಕೋರಿರುತ್ತಾರೆ.

ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಇಲಾಖೆ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

Scanned with CamScanner

5. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)**

ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಿ.ಎ ವತಿಯಿಂದ ನಿರ್ವಹಣೆ ಮಾಡುತ್ತಿರುವ ಬಡಾವಣೆಗಳಲ್ಲಿ ಬೀದಿ ದೀಪಗಳು ಇಲ್ಲದೇ ಇರುವ ಬಗ್ಗೆ ದೂರಿರುತ್ತಾರೆ.

ಈ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

6. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ಬೊಮ್ಮನಹಳ್ಳಿ ವಲಯ)**

ವಾರ್ಡ್ ವ್ಯಾಪ್ತಿಯಲ್ಲಿನ ಅವಲಹಳ್ಳಿ ಕೆರೆಯನ್ನು ಅಭಿವೃದ್ಧಿ ಪಡಿಸಿದ್ದ ಉಳಿಕೆ ಇರುವ ಪಾದಚಾರಿ ಮಾರ್ಗ, ದೀಪಗಳು ಹಾಗೂ ಕೆರೆಯ ಸುತ್ತ ಕಾಂಪೌಂಡ ನಿರ್ಮಿಸಲು ಕೋರಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

7. **ಸಹಾಯಕ ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ಬೊಮ್ಮನಹಳ್ಳಿ ವಲಯ)**

ವಾರ್ಡ್ ವ್ಯಾಪ್ತಿಯಲ್ಲಿನ ಶ್ರೀನಿಧಿ ಬಡಾವಣೆ 5ನೇ ಮುಖ್ಯ ರಸ್ತೆಯಲ್ಲಿ ಇತ್ತೀಚೆಗೆ ಅಳವಡಿಸಲಾಗಿದ್ದು ಡಾಂಬರು ಅಲ್ಲಲ್ಲಿ ಕತ್ತು ಹೋಗಿ ರಸ್ತೆಯಲ್ಲಿ ಜಲ್ಲಿಗಳಾಗಿ ವಾಹನ ಸವಾರರಿಗೆ ತೊಂದರೆಯಾಗಿರುವ ಬಗ್ಗೆ ದೂರಿರುತ್ತಾರೆ. ಚುಂಚಘಟ್ಟ ಮುಖ್ಯ ರಸ್ತೆಯಲ್ಲಿನ ಬೃಹತ್ ನೀರುಗಾಲುವೆ ಬಳಿ ರಸ್ತೆ ಗುಂಡಿಗಳು ಬಿದ್ದಿದ್ದು ಇದನ್ನು ಕೂಡಲೇ ಮುಚ್ಚಲು ಕೋರಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

8. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಅಂಜನಾಪುರ ಉಪ ವಿಭಾಗ)**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅವಲಹಳ್ಳಿ ಅಕ್ಬರ್ ಮಸೀದಿ ರಸ್ತೆ ಹಾಗೂ ಸುತ್ತ ಮುತ್ತಲಿನ ರಸ್ತೆಗಳಿಗೆ ಕಾಂಕ್ರೀಟ್ ಅಳವಡಿಸಲು ಕೋರಿರುತ್ತಾರೆ. ಹರಿನಗರ ಕ್ರಾಸ್ ಇಂದ ಯನ್ನಾರ್ ಶಾಲೆಯ ವರೆಗೆ ರಸ್ತೆ ಗುಂಡಿಗಳನ್ನು ಮುಚ್ಚಿದ್ದರೂ ಈ ಭಾಗದ ರಸ್ತೆಗೆ ಮರು ಡಾಂಬರೀಕರಣ ಮಾಡಲು ಕೋರಿರುತ್ತಾರೆ. ಹರಿನಗರ ರಾಮಮಂದಿರ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿದ್ದು ಈ ರಸ್ತೆಗೆ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಕೊರಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಅಂಜನಾಪುರ ಉಪ ವಿಭಾಗ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

9.ನೋಡಲ್ ಅಧಿಕಾರಿ:-

ಅದರಂತೆ ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕರಾದ ಶ್ರೀ ಪ್ರಮೋದ್ ಕುಮಾರ್ ರವರು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಆದ್ಯತೆ ಮೇರೆಗೆ ಸೂಕ್ತ ಕ್ರಮ ಜರುಗಿಸಲಾಗುವುದಾಗಿ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

-ಸಹಿ-
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.196 ಅಂಜನಾಪುರ

-ಸಹಿ-
ಅಧ್ಯಕ್ಷಕರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.196 ಅಂಜನಾಪುರ

Scanned with CamScanner